**ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 3 ನೇ ಎದುರುದಾರರ ಪರವಾಗಿ ಶ್ರೀ ಬಿ ವಿ ಪಿ ವಕೀಲರಿಂದ**

ಅಪಘಾತ ಆದಾಗ ನನ್ನ ಮಗನ ಜೊತೆ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಹನುಮಕ್ಕ ನನ್ನ ಅತ್ತೆ. ರವಿಯವರು ನನ್ನ ಗಂಡ. ಅವರಿಗೆ ರಮೇಶ್ ಎಂದೂ ಸಹ ಕರೆಯುತ್ತಾರೆ. ಅವರನ್ನು ರೇವಣ್ಣ ಎಂದೂ ಸಹ ಕರೆಯುತ್ತಾರೆ ಎಂದರೆ ಸರಿಯಲ್ಲ. ಅಪಘಾತದ ದಿವಸ ನನ್ನ ಮಗ ಕಿರಾಣಿ ಅಂಗಡಿಗೆ ನನ್ನ ಅತ್ತೆಯ ಜೊತೆ ಹೋಗಿದ್ದ ಎಂದರೆ ಸರಿಯಲ್ಲ. ಆತನು ಒಬ್ಬನೇ ಹೋಗಿದ್ದ. ಅಪಘಾತದ ಕಾಲಕ್ಕೆ ನಾನು ನನ್ನ ಮಗನ ಜೊತೆ ಇದ್ದೆ ಮತ್ತು ನನ್ನ ಅತ್ತೆ ಇರಲಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಕಾರಿನ ಚಾಲಕ ಅತಿವೇಗವಾಗಿ ಬಂದು ನನ್ನ ಮಗನಿಗೆ ಡಿಕ್ಕಿ ಹೊಡೆದು ಅಪಘಾತಕ್ಕೆ ಕಾರಣ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಒಬ್ಬನನ್ನೇ ಕಿರಾಣಿ ಅಂಗಡಿಗೆ ಕಳುಹಿಸಿ ಆತನನ್ನು ಜಾಗ್ರತೆಯಾಗಿ ನೋಡಿಕೊಳ್ಳದೇ ಇರುವುದು ಅಪಘಾತಕ್ಕೆ ಕಾರಣ ಎಂದರೆ ಸರಿಯಲ್ಲ. ಕೇವಲ ಪರಿಹಾರ ಬರುತ್ತದೆ ಎಂದು ರಮೇಶ್ ಎನ್ನುವವರ ಮೂಲಕ ಸುಳ್ಳು ದೂರು ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ವಾಸ್ತವಾಂಶಗಳನ್ನು ಮರೆಮಾಚಿ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತೆಕ್ಕಲಕೋಟೆ ಮತ್ತು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗಳು ಸರಕಾರಿ ಆಸ್ಪತ್ರೆಯಾಗಿರುವ ಕಾರಣ ಉಚಿತ ಚಿಕಿತ್ಸೆ ನೀಡಲಾಗಿದೆ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ಎರಡೂವರೆ ಲಕ್ಷ ಹಣ ಖರ್ಚು ಮಾಡಿದ್ದೇವೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿಪಿ-22 ಮತ್ತು 23 ದಾಖಲೆಯನ್ನ ಕೇಸಿಗೋಸ್ಕರ ಸೃಷ್ಟಿ ಮಾಡಿಡಲಾಗಿದೆ ಎಂದರೆ ಸರಿಯಲ್ಲ. ಮಿಮ್ಸ್ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡಿರುವ ಕಾರಣ ನನ್ನ ಮಗನಿಗೆ ಯಾವುದೇ ನ್ಯೂನ್ಯತೆ ಉಂಟಾಗಿಲ್ಲ ಮೊದಲಿನಂತೆ ಚಟುವಟಿಕೆಯಿಂದ ಇರುತ್ತಾನೆ ಎಂದರೆ ಸರಿಯಲ್ಲ. ಕೇವಲ ಹೆಚ್ಚಿನ ಪರಿಹಾರ ಪಡೆಯ ಬೇಕು ಎಂದು ವೈದ್ಯರ ಜೊತೆ ಶಾಮಿಲಾಗಿ ನಿಪಿ-20 ರಂತೆ ಸುಳ್ಳು ದೃಢೀಕರಣ ಪತ್ರ ಪಡೆದು ತಂದು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-20 ರಲ್ಲಿ ಹೇಳಿರುವಂತಹ ಯಾವುದೇ ನ್ಯೂನ್ಯತೆಗಳು ನನ್ನ ಮಗನಿಗೆ ಉಂಟಾಗಿಲ್ಲ ಎಂದರೆ

ಸರಿಯಲ್ಲ. ನನ್ನ ಮಗ ಮೊದಲಿನಂತೆ ಆರೋಗ್ಯವಾಗಿದ್ದು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗ ಈಗಲೂ ಶಾಲೆಗೆ ಹೋಗುತ್ತಾನೆ ಎಂದರೆ ಸರಿ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**